# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 476
2. ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 22.12.2022
4. ಉತ್ತರಿಸುವವರು : ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಅನಿಲ ಕಂಪನಿಗಳಿಂದ ಗ್ಯಾಸ್ ಪೈಪ್ ಅಳವಡಿಕೆ ಯೋಜನೆಯ ಉದ್ದೇಶಗಳೇನು. ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಒಡಂಬಡಿಕೆಯ ವಿವರಗಳೇನು (ಪೂರ್ಣ ವಿವರ ನೀಡುವುದು). | ನೈಸರ್ಗಿಕ ಅನಿಲವನ್ನು ಪರಿಸರ ಸ್ನೇಹಿ ಮತ್ತು ಹಸಿರು ಇಂಧನವೆಂದು ಪರಿಗಣಿಸಲಾಗಿದ್ದು, ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಅನಿಲ ಕಂಪನಿಗಳಿಂದ ನೈಸರ್ಗಿಕ ಅನಿಲ (NG) ಪೈಪ್‌ಲೈನ್ ಅಳವಡಿಕೆ ಯೋಜನೆಗಳ ಉದ್ದೇಶವು, ಗೃಹಬಳಕೆಗಳಿಗೆ, ವಾಣಿಜ್ಯ ಸಂಸ್ಥೆಗಳು, ಕೈಗಾರಿಕೆಗಳು ಮತ್ತು ಸಾರಿಗೆ ವಾಹನಗಳಿಗೆ ನೈಸರ್ಗಿಕ ಅನಿಲವನ್ನು ಪೂರೈಸುವುದು. 2030 ರ ವರ್ಷದ ವೇಳೆಗೆ ದೇಶದ ಪ್ರಾಥಮಿಕ ಶಕ್ತಿ ಮಿಶ್ರಣದಲ್ಲಿ ನೈಸರ್ಗಿಕ ಅನಿಲದ ಪಾಲನ್ನು ಶೇ. 6.2 ರಿಂದ ಶೇ. 15 ಕ್ಕೆ ಹೆಚ್ಚಿಸುವ ಗುರಿಯನ್ನು ಭಾರತ ಸರ್ಕಾರ (GOI) ಹೊಂದಿದೆ.<br><br>ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ ಯಾವುದೇ ಒಪ್ಪಂದವಿಲ್ಲ. ಗ್ಯಾಸ್ ಪೈಪ್‌ಲೈನ್ ಮೂಲಸೌಕರ್ಯ ವಿಷಯವು ಸಂವಿಧಾನದ ಒಕ್ಕೂಟದ ಪಟ್ಟಿಯ ಅಡಿಯಲ್ಲಿ ಬರುವುದರಿಂದ, ಗ್ಯಾಸ್ ಪೈಪ್‌ಲೈನ್ ಹಾಕುವ ಅಧಿಕಾರವನ್ನು ಭಾರತ ಸರ್ಕಾರ ಮತ್ತು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ (PNGRB) ನಿಗದಿತ ಪ್ರಕ್ರಿಯೆಯ ಮೂಲಕ ನೀಡಲಾಗುತ್ತದೆ. ಈ ಯೋಜನೆಗಳ ಪ್ರಾಥಮಿಕ ಫಲಾನುಭವಿಗಳು ರಾಜ್ಯದ ಸಾರ್ವಜನಿಕರಾಗಿರುವುದರಿಂದ, ರಾಜ್ಯ ಸರ್ಕಾರವು ಈ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಅಗತ್ಯವಾದ ಬೆಂಬಲವನ್ನು ಒದಗಿಸುತ್ತದೆ. |
| ಆ | ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಅನಿಲ ಕಂಪನಿಗಳಿಂದ ಗ್ಯಾಸ್ ಪೈಪ್ ಅಳವಡಿಕೆ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ ಮತ್ತು ಪೂರ್ಣಗೊಳಿಸಲು ನಿಗದಿ ಪಡಿಸಿರುವ ದಿನಾಂಕ ಯಾವುದು; | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಮೆ: ಗೇಲ್ ಇಂಡಿಯಾ ಲಿಮಿಟೆಡ್ ಅನಿಲ ಕಂಪನಿಯಿಂದ ಅನುಷ್ಠಾನಗೊಳಿಸಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಎರಡು ಪೈಪ್‌ಲೈನ್‌ಗಳ ವಿವರ ಈ ಕೆಳಕಂಡಂತಿದೆ.<br><br>1. ಧಾಬೋಲ್-ಬೆಂಗಳೂರು ಪೈಪ್‌ಲೈನ್ (ಡಿ.ಬಿ.ಪಿ.ಎಲ್) - ಈ ಯೋಜನೆಯ ಒಟ್ಟು 1147 ಕಿ.ಮೀ.ಗಳ ಉದ್ದದ ಗ್ಯಾಸ್ ಪೈಪ್‌ಲೈನಲ್ಲಿ ಸುಮಾರು 800 ಕಿ.ಮೀ. ಗ್ಯಾಸ್ ಪೈಪ್‌ಲೈನ್ ಜಾಲವು ಕರ್ನಾಟಕ ರಾಜ್ಯದಲ್ಲಿದೆ ಮತ್ತು ಈ ಪೈಪ್ ಲೈನ್ ರಾಜ್ಯದ 10 ಜಿಲ್ಲೆಗಳ ಮೂಲಕ ಹಾದು ಹೋಗುತ್ತಿದೆ. |

2. ಕೋಚಿ-ಕೂಟನಾಡು-ಮಂಗಳೂರು-ಬೆಂಗಳೂರು ಪೈಪ್ ಲೈನ್ (ಕೆ.ಕೆ.ಎಂ.ಬಿ.ಪಿ.ಎಲ್) - ಈ ಯೋಜನೆಯ ಒಟ್ಟು 447 ಕಿಮೀಗಳ ಉದ್ದದ ಗ್ಯಾಸ್ ಪೈಪ್‌ಲೈನಲ್ಲಿ ಸುಮಾರು 44 ಕಿಮೀ ಗ್ಯಾಸ್ ಪೈಪ್‌ಲೈನ್ ಜಾಲವು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ.

PNGRB, ಕೇಂದ್ರ ಸರ್ಕಾರ ರವರಿಂದ ಅಧಿಕೃತವಾಗಿ ನೇಮಕ ಮಾಡಿರುವ 8 ನಗರ ಅನಿಲ ವಿತರಣೆಯ (ಸಿಜಿಡಿ) ಸಂಸ್ಥೆಗಳ ವಿವರಗಳು ಈ ಕೆಳಕಂಡಂತಿವೆ:

| ಸಂಖ್ಯೆ | ಸಿ.ಜಿ.ಡಿ ಸಂಸ್ಥೆಯ ಹೆಸರು | ಸಂಸ್ಥೆಯ ವಿವರ |
|---|---|---|
| 1 | ಮೆ: ಗೇಲ್ ಗ್ಯಾಸ್ ಲಿಮಿಟೆಡ್ | ಭಾರತ ಸರ್ಕಾರದ ಉದ್ಯಮ (undertaking) ಸಂಸ್ಥೆಗಳು |
| 2 | ಮೆ: ಭಾರತ್ ಗ್ಯಾಸ್ ರಿಸೋರ್ಸ್ ಲಿಮಿಟೆಡ್ | |
| 3 | ಮೆ: ಮಹಾರಾಷ್ಟ್ರ ನ್ಯಾಚುರಲ್ ಗ್ಯಾಸ್ ಲಿಮಿಟೆಡ್ | ಭಾರತ ಸರ್ಕಾರದ ಉದ್ಯಮ ಸಂಸ್ಥೆಗಳಾದ ಎಂ.ಐ.ಡಿ.ಸಿ ಮತ್ತು ಐ.ಜಿ.ಎಲ್, ಸಂಸ್ಥೆಗಳೊಡನೆ ಈಕ್ವಿಟಿ ಭಾಗವಹಿಸುವಿಕೆಯೊಂದಿಗೆ ಜಂಟಿ ಉದ್ಯಮ |
| 4 | ಮೆ: ಇಂಡಿಯನ್-ಆಯಿಲ್ ಅದಾನಿ ಗ್ಯಾಸ್ ಪ್ರೈವೇಟ್ ಲಿಮಿಟೆಡ್ | ಭಾರತ ಸರ್ಕಾರದ ಜಂಟಿ ಉದ್ಯಮ ಮತ್ತು ಖಾಸಗಿ ಕಂಪನಿಗಳೊಡನೆ ಜಂಟಿ ಉದ್ಯಮ |
| 5 | ಮೆ:ಮೆಗಾ ಇಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ | ಖಾಸಗಿ ಸಂಸ್ಥೆಗಳು |
| 6 | ಮೆ: ಎ.ಜಿ & ಪಿ ಸಿಟಿ ಗ್ಯಾಸ್ ಪ್ರೈವೇಟ್ ಲಿಮಿಟೆಡ್ | |
| 7 | ಮೆ: ಯುನಿಸನ್ ಎನ್ವಿರೋ ಪ್ರೈವೇಟ್ ಲಿಮಿಟೆಡ್ | |
| 8 | ಮೆ: ಅದಾನಿ ಟೋಟಲ್ ಗ್ಯಾಸ್ ಲಿಮಿಟೆಡ್ | |

ಡಿ.ಬಿ.ಪಿ.ಎಲ್ ಮತ್ತು ಕೆ.ಕೆ.ಎಂ.ಬಿ.ಪಿ.ಎಲ್ ಗ್ಯಾಸ್ ಪೈಪ್‌ಲೈನ್ ಗಳು ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮೆ: ಗೇಲ್ ಗ್ಯಾಸ್ ಲಿಮಿಟೆಡ್, ಹುಬ್ಬಳ್ಳಿ ಜಿಲ್ಲೆಯಲ್ಲಿ ಮೆ: ಇಂಡಿಯನ್ ಆಯಿಲ್ ಅದಾನಿ ಗ್ಯಾಸ್ ಪ್ರೈವೇಟ್ ಲಿಮಿಟೆಡ್, ಚಿತ್ರದುರ್ಗ ಜಿಲ್ಲೆಯಲ್ಲಿ ಮೆ:ಯುನಿಸನ್ ಎನ್ವಿರೋ ಪ್ರೈವೇಟ್ ಲಿಮಿಟೆಡ್, ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ಮೆ: ಮೇಘಾ ಇಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಿ.ಜಿ.ಡಿ ಸಂಸ್ಥೆಗಳು ನಗರ ಅನಿಲ ವಿತರಣೆ ಯೋಜನೆ ಮೂಲಕ ಮನೆಗಳಿಗೆ, ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಗಳಿಗೆ ಹಾಗೂ ವಾಹನಗಳಿಗೆ ಅನಿಲ ಸಂಪರ್ಕವನ್ನು ಒದಗಿಸುತ್ತಿವೆ.

ಮುಂದುವರೆದು, ಮುಂದಿನ 3 ವರ್ಷಗಳಲ್ಲಿ ಡಿ.ಬಿ.ಪಿ.ಎಲ್ ಮತ್ತು ಕೆ.ಕೆ.ಎಂ.ಬಿ.ಪಿ.ಎಲ್ ಗ್ಯಾಸ್ ಪೈಪ್‌ಲೈನ್‌ಗಳಿಂದ ಈ ಕೆಳಕಂಡ

| | | |
|---|---|---|
| | | ಸಿ.ಜಿ.ಡಿ ಸಂಸ್ಥೆಗಳಿಗೆ ಇತರೆ ಜಿಲ್ಲೆಗಳಲ್ಲಿ ಅನಿಲ ಪೂರೈಸಲು ಸಂಪರ್ಕವನ್ನು ಒದಗಿಸುತ್ತದೆ. |

| ಸಿ.ಜಿ.ಡಿ ಸಂಸ್ಥೆಯ ಹೆಸರು | ಜಿಲ್ಲೆಗಳು |
|---|---|
| ಎ.ಜಿ & ಪಿ | ಬಾಗಲಕೋಟೆ, ಕೊಪ್ಪಳ ಮತ್ತು ರಾಯಚೂರು |
| | ಚಿಕ್ಕಮಗಳೂರು, ಹಾಸನ ಮತ್ತು ಕೊಡಗು |
| | ಮೈಸೂರು, ಮಂಡ್ಯ ಮತ್ತು ಚಾಮರಾಜನಗರ |
| | ಉತ್ತರ ಕನ್ನಡ, ಹಾವೇರಿ ಮತ್ತು ಶಿವಮೊಗ್ಗ |
| | ಕೋಲಾರ |
| | ಕಲಬುರಗಿ ಮತ್ತು ವಿಜಯಪುರ |
| ಬಿ.ಜಿ.ಆರ್.ಎಲ್ / ಬಿ.ಪಿ.ಸಿ.ಎಲ್ | ಬಳ್ಳಾರಿ ಮತ್ತು ಗದಗ |
| ಎಂ.ಎನ್.ಜಿ.ಎಲ್ | ರಾಮನಗರ |

| | | |
|---|---|---|
| ಇ | ರಾಜ್ಯಗಳಲ್ಲಿ ಗ್ಯಾಸ್ ಪೈಪ್ ಅಳವಡಿಕೆ ಕಾರ್ಯಕ್ರಮ ಹಿಂದೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಕಾರಣಗಳು ಯಾವುವು ಮತ್ತು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು); | ಗ್ಯಾಸ್ ಪೈಪ್‌ಲೈನ್ ಮತ್ತು ಸಿಟಿ ಗ್ಯಾಸ್ ವಿತರಣಾ ಸಂಸ್ಥೆಗಳು ರಾಜ್ಯದಲ್ಲಿ ಕಾರ್ಯಗತಗೊಳಿಸುವ ಸಮಯದಲ್ಲಿ ಹೆಚ್ಚಿನ ಅನುಮತಿ ಶುಲ್ಕಗಳು, ಅನುಮತಿಗಳನ್ನು ಪಡೆಯುವಲ್ಲಿ ವಿಳಂಬ, ಯೋಜನೆಗಳ ಕಾರ್ಯಾಚರಣೆಯ ಅಗತ್ಯಗಳಿಗಾಗಿ ಭೂಸ್ವಾಧೀನ, ಅಗತ್ಯ ಅನುಮೋದನೆ ಮುಂತಾದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ.<br><br>ಭಾರತ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಸಲಹೆಯ ಪ್ರಕಾರ, ಗ್ಯಾಸ್ ಪೈಪ್‌ಲೈನ್ ಮೂಲಸೌಕರ್ಯಕ್ಕಾಗಿ ದಿನಾಂಕ 04.03.2022 ರ ಅಧಿಸೂಚನೆ ಸಂಖ್ಯೆ. IDD 127 DIA 2021 ಮೂಲಕ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯಲ್ಲಿ ವಿಶೇಷ ಡೆಸ್ಕ್ ಅನ್ನು ರಚಿಸಲಾಗಿದೆ. ಈ ವಿಶೇಷ ಡೆಸ್ಕ್ ರಾಜ್ಯದಲ್ಲಿ ಗ್ಯಾಸ್ ಪೈಪ್‌ಲೈನ್ ಯೋಜನೆಗಳು, ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್ (ಸಿಜಿಡಿ) ಯೋಜನೆಗಳು, ಸಂಕುಚಿತ ಜೈವಿಕ ಅನಿಲ (ಸಿಬಿಜಿ) ಯೋಜನೆಗಳು ಇತ್ಯಾದಿಗಳನ್ನು ಕೈಗೊಳ್ಳುವ ಎಲ್ಲಾ ಸಂಸ್ಥೆಗಳೊಂದಿಗೆ ಸಮನ್ವಯಗೊಳಿಸುತ್ತದೆ. ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯು ಅಂತಹ ಸಂಸ್ಥೆಗಳಿಗೆ ನೋಡಲ್ ಇಲಾಖೆಯಾಗಿದ್ದು, ಕಾಲಕಾಲಕ್ಕೆ ಈ ಯೋಜನೆಗಳನ್ನು ಮೇಲ್ವಿಚಾರಣೆ ಮಾಡುತ್ತದೆ ಮತ್ತು ಬೆಂಬಲಿಸುತ್ತದೆ.<br><br>ವಿವಿಧ ಅಡೆತಡೆಗಳನ್ನು ನಿವಾರಿಸಲು ಮತ್ತು ರಾಜ್ಯದಲ್ಲಿ ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್ ಗ್ಯಾಸ್ ಪೈಪ್‌ಲೈನ್ ಮೂಲಸೌಕರ್ಯಗಳ ತ್ವರಿತ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು "ಕರ್ನಾಟಕ ರಾಜ್ಯದಲ್ಲಿ ನಗರ ಅನಿಲ ವಿತರಣಾ ನೀತಿ" ಯನ್ನು ರೂಪಿಸುವ ಪ್ರಕ್ರಿಯೆಯಲ್ಲಿದೆ. |

ಸಂಖ್ಯೆ: ಐಡಿಡಿ 93 ಐಟಿಎಸ್ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು